ಕಚೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

## ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಅವರ ನಡವಳಿಗಳು

ವಿಷಯ: ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ 10 ವರ್ಷಗಳು ಮತ್ತು ಅದಕ್ಕಿಂತಲೂ ಹೆಚ್ಚಿನ ಅವಧಿಯಿಂದ ಬಿಲ್ ಕಲೆಕ್ಟರ್ ಮತ್ತು ಇತರ ಸಮಾನಾಂತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಗ್ರೇಡ್-2 ಕಾರ್ಯದರ್ಶಿ ಹುದ್ದೆಗೆ ಆಯ್ಕೆ ಮೂಲಕ ನೇಮಕಾತಿ ಮಾಡುವ ಕುರಿತು

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂ.ಗ್ರಾಅಪ 181 ಗ್ರಾಪಂಕಾ 2011, ಬೆಂಗಳೂರು ದಿನಾಂಕ:31.03.2012
2. ಸರ್ಕಾರದ ಪತ್ರ ಸಂ.ಗ್ರಾಅಪ 141 ಗ್ರಾಪಂಕಾ 2012 ಬೆಂಗಳೂರು ದಿನಾಂಕ:18.06.2012
3. ಈ ಕಛೇರಿಯ ಸಮ ಸಂಖ್ಯೆಯ ಜ್ಞಾಪನ ದಿನಾಂಕ:05.12.2016
4. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:22.02.2017
5. ಈ ಕಛೇರಿಯ ಸಮ ಸಂಖ್ಯೆಯ ಜ್ಞಾಪನ ದಿನಾಂಕ:25.03.2017
6. ಸರ್ಕಾರದ ಸುತ್ತೋಲೆ ಸಂ.ಗ್ರಾಅಪ 263 ಗ್ರಾಪಂಕಾ 2017 ಬೆಂಗಳೂರು ದಿನಾಂಕ:01.04.2017
7. ಸರ್ಕಾರದ ಪತ್ರ ಸಂ.ಗ್ರಾಅಪ 263 ಗ್ರಾಪಂಕಾ 2017 ಬೆಂಗಳೂರು ದಿನಾಂಕ:26.04.2017
8. ಈ ಕಛೇರಿಯ ಸಮ ಸಂಖ್ಯೆಯ ಜ್ಞಾಪನ ದಿನಾಂಕ:02.05.2017

*****

### ಪ್ರಸ್ತಾವನೆ

ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಜಿಲ್ಲೆಗೆ ಮಂಜೂರಾಗಿರುವ ಗ್ರೇಡ್-2 ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ ಹುದ್ದೆಗಳ ಪೈಕಿ ಶೇಕಡ 70 ರಷ್ಟು ಹುದ್ದೆಗಳನ್ನು ಹಿಂದಿನ ವಿಲೇಜ್ ಪಂಚಾಯತ್‌ಗಳು ಅಥವಾ ಮಂಡಲ ಪಂಚಾಯತಿಗಳು ಅಥವಾ ಗ್ರಾಮ ಪಂಚಾಯತಿಗಳಲ್ಲಿ ಪೂರ್ಣಾವಧಿ ಕಾರ್ಯದರ್ಶಿ, ಲೆಕ್ಕಿಗರು, ಗುಮಾಸ್ತರು, ಬೆರಳಚ್ಚುಗಾರರು, ಬಿಲ್ ಕಲೆಕ್ಟರ್‌ಗಳಾಗಿ ಸೇವೆ ಸಲ್ಲಿಸಿರುವವರನ್ನು ಜೇಷ್ಟತೆ ಮತ್ತು ಮೀಸಲಾತಿ ಆಧಾರದ ಮೇಲೆ ಆಯ್ಕೆ ಮೂಲಕ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಗ್ರಾಮ ಪಂಚಾಯತಿ ಗ್ರೇಡ್-2 ವೃಂದ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದದ ಹುದ್ದೆಗಳಿಗೆ ಬಿಲ್ ಕಲೆಕ್ಟರ್ ಇತ್ಯಾದಿ ವೃಂದದಿಂದ ನೇಮಕಾತಿ ಮಾಡುವಾಗ ಅನುಸರಿಸಬೇಕಾದ ವಿಧಿ ವಿಧಾನಗಳ ಕುರಿತು ತಿಳಿಸಲಾಗಿದೆ.

ಮೇಲಿನ ಎರಡೂ ಸರ್ಕಾರದ ಆದೇಶ ಮತ್ತು ಸೂಚನೆಗಳ ಅನ್ವಯ ಉಲ್ಲೇಖ(3)ರ ಜ್ಞಾಪನದಲ್ಲಿ ಮೇಲಿನಂತೆ ಗ್ರಾಮ ಪಂಚಾಯತಿಗಳಲ್ಲಿ 10 ವರ್ಷಗಳು ಮತ್ತು ಅದಕ್ಕಿಂತಲೂ ಹೆಚ್ಚಿನ ಅವಧಿಯಿಂದ ಜಿ.ಪಂ.ಯ ಅನುಮೋದನೆ ಪಡೆದು ಕಾರ್ಯನಿರ್ವಹಿಸುತ್ತಿರುವ ಗ್ರಾ.ಪಂ. ನೌಕರರ ಅಂತಿಮ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಕಛೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

ಆ ಪ್ರಕಾರ ಉಲ್ಲೇಖ(4)ರ ಪತ್ರದ ಮೂಲಕ ಅರ್ಹ ನೌಕರರ ಸೇವಾ ದಾಖಲೆಗಳನ್ನು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಂದ ಪಡೆದು ಅವರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ಅಂತಿಮವಾಗಿ ಉಲ್ಲೇಖ(5)ರ ಈ ಕಛೇರಿಯ ಜ್ಞಾಪನದ ಮೂಲಕ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಈ ಆಯ್ಕೆ ಪಟ್ಟಿಗೆ ಜಿಲ್ಲೆಯ ಯಾವುದೇ ಗ್ರಾ.ಪಂ. ನೌಕರರಿಂದ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ ಪುನಃ ಉಲ್ಲೇಖ(6)ರ ಜ್ಞಾಪನದ ಮೂಲಕ ಆಯ್ಕೆಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸಲಾಗಿರುತ್ತದೆ.

ಅದರನ್ವಯ ಮೇಲಿನಂತೆ ಅಂತಿಮವಾಗಿ ಆಯ್ಕೆಗೊಳಿಸಿದ ಅರ್ಹ ನೌಕರರನ್ನು ಸರ್ಕಾರದ ಆದೇಶದ ಅನ್ವಯ 100 ರೋಸ್ಟರ್ ಬಿಂದುಗಳು ಹಾಗೂ ಸಮತಳ ಮೀಸಲಾತಿ ಅನ್ವಯ ಮತ್ತು ಜೇಷ್ಠತೆಗೆ ಅನುಗುಣವಾಗಿ ಗ್ರೇಡ್-2 ಕಾರ್ಯದರ್ಶಿ ಹುದ್ದೆಗೆ ಆಯ್ಕೆ ಮೂಲಕ ನೇಮಕಾತಿ ಮಾಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

**ಸಂ.ಜಿಪಂಬ/ಸಿಬ್ಬಂದಿ(3)/ಗ್ರಾ.ಪಂ./ನೇಮಕಾತಿ/49/2010-11** **ದಿನಾಂಕ:20.05.2017**

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ವಿವರಗಳ ಮೇರೆಗೆ ಹಿಂದಿನ ವಿಲೇಜ್ / ಮಂಡಲ / ಗ್ರಾಮ ಪಂಚಾಯತಿಗಳಲ್ಲಿ ಸತತವಾಗಿ 10 ವರ್ಷಗಳ ಪೂರ್ಣಾವಧಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಉಲ್ಲೇಖ(1)ರ ಸರ್ಕಾರದ ಆದೇಶದ ಅನ್ವಯ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರುವ ಕಾರ್ಯದರ್ಶಿ/ಲೆಕ್ಕಿಗರು/ ಗುಮಾಸ್ತರು/ಬೆರಳಚ್ಚುಗಾರರು/ಬಿಲ್ ಕಲೆಕ್ಟರ್ ವೃಂದದ ಈ ಕೆಳಕಂಡ ನೌಕರರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಗ್ರೇಡ್-2 ಕಾರ್ಯದರ್ಶಿ ಹುದ್ದೆಗೆ ವೇತನ ಶ್ರೇಣಿ 11,600-200-12,000-250-13,000-300-14,200-350-15,600-400-17,200-450-19,000-500-21,000 ರಲ್ಲಿ ಈ ಕೆಳಕಂಡ ಷರತ್ತಿಗೊಳಪಟ್ಟು ನೇಮಕಾತಿ ಮಾಡಿ ಆದೇಶಿಸಿದೆ.

| ಕ್ರ. ಸಂ | ಕರವಸೂಲಿಗಾರರ ಹೆಸರು ಮತ್ತು ಗ್ರಾ.ಪಂ. | ಜೇಷ್ಠತಾ ಪಟ್ಟಿಯಲ್ಲಿನ ಕ್ರ.ಸಂ. | ರೋಸ್ಟರ್ ಬಿಂದು | ಅಭ್ಯರ್ಥಿಯ ಮೀಸಲಾತಿ | ಆಯ್ಕೆ ಮಾಡ ಬೇಕಾದ ಪ್ರವರ್ಗ | ಗ್ರೇಡ್-2 ಕಾರ್ಯದರ್ಶಿ ಗಳಾಗಿ ನೇಮಕ ಮಾಡಿ ಸ್ಥಳ ನಿಯುಕ್ತಿಗೊಳಿಸಿದ ಗ್ರಾ.ಪಂ. |
|---|---|---|---|---|---|---|
| 1 | ಕೆ. ರುದ್ರಪ್ಪ ವಿಠಲಾಪುರ ಗ್ರಾ.ಪಂ. ಸಂಡೂರು ತಾ: | 01 | 85 | 2(ಎ) | 2(ಎ) ಮಹಿಳೆ | ಶಿಡಿಗಿನಮೊಳ, ಬಳ್ಳಾರಿ ತಾಲೂಕು |
| 2 | ಟಿ. ಮಂಜುನಾಥ ಹಿರೇಕುಂಬಳಗುಂಟೆ ಗ್ರಾ.ಪಂ. ಕೂಡ್ಲಿಗಿ ತಾಲೂಕು | 02 | 86 | ಪ.ಪಂ. | ಸಾಮಾನ್ಯ (ಗ್ರಾಮೀಣ) | ಕತ್ತೆಬೆನ್ನೂರು ಹಡಗಲಿ ತಾಲೂಕು |
| 3 | ಮಾಲ್ವಿ ಅಲ್ಲಾಬಕಷ್ ಕಡ್ಲಬಾಳು ಗ್ರಾ.ಪಂ. ಹ.ಬೊ.ಹಳ್ಳಿ ತಾ: | 35 | 87 | 2(ಬಿ) ಮುಸ್ಲಿಂ | 2(ಬಿ) | ದಾಸನಹಳ್ಳಿ ಹಡಗಲಿ ತಾಲೂಕು |
| 4 | ಎಸ್.ಕೆ.ಪಿ. ಕೊಟ್ರೇಶ್ ಕೆ.ಅಯ್ಯನಹಳ್ಳಿ ಗ್ರಾ.ಪಂ. ಕೂಡ್ಲಿಗಿ ತಾ: | 03 | 88 | 3(ಬಿ) ಲಿಂಗಾಯಿತ | ಸಾಮಾನ್ಯ (ಮಹಿಳೆ) | ದೇವಗೊಂಡನಹಳ್ಳಿ ಹಡಗಲಿ ತಾಲೂಕು |

ಕಚೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

| | | | | | | |
|---|---|---|---|---|---|---|
| 5 | ಹೆಚ್. ಹುಲುಗಪ್ಪ ನಂ.10 ಮುದ್ದಾಪುರ ಗ್ರಾ.ಪಂ. ಹೊಸಪೇಟೆ ತಾಲೂಕು | 43 | 89 | ಪ.ಜಾ | ಪ.ಜಾ (ಗ್ರಾಮೀಣ) | ಸೂಲದಹಳ್ಳಿ ಕೂಡ್ಲಿಗಿ ತಾಲೂಕು |
| 6 | ಹೆಚ್.ಎಂ. ವಿಜಯ ಕುಮಾರ್. ಗದ್ದಿಕೇರಿ ಗ್ರಾ.ಪಂ. ಹ.ಬೊ.ಹಳ್ಳಿ ತಾ: | 04 | 90 | 3(ಬಿ) ಲಿಂಗಾಯಿತ | ಸಾಮಾನ್ಯ (ಮಾಜಿ ಸೈನಿಕರು) | ಹಾರಕಭಾವಿ ಕೂಡ್ಲಿಗಿ ತಾಲೂಕು |
| 7 | ಜಿ. ಹುಚ್ಚಪ್ಪ ವಿಠಲಾಪುರ ಗ್ರಾ.ಪಂ. ಸಂಡೂರು ತಾ: | 08 | 91 | 2(ಎ) | 2(ಎ) | ಗದ್ದಿಕೇರಿ ಹ.ಬೊ.ಹಳ್ಳಿ ತಾಲೂಕು |
| 8 | ಶರಣಪ್ಪ ಕೊಟ್ಟಪ್ಪಗಳ ಗುಂಡುಮುಣುಗು ಗ್ರಾ.ಪಂ. ಕೂಡ್ಲಿಗಿ ತಾ: | 05 | 92 | 3(ಬಿ) ಲಿಂಗಾಯಿತ | ಸಾಮಾನ್ಯ (ಮಹಿಳೆ) | ತಂಬ್ರಹಳ್ಳಿ ಹ.ಬೊ.ಹಳ್ಳಿ ತಾಲೂಕು |
| 9 | ರಾಮಪ್ಪ ಮಾಳ್ಗಿ ಗೊಲ್ಲಲಿಂಗಮ್ಮನ ಹಳ್ಳಿ ಗ್ರಾ.ಪಂ. ಸಂಡೂರು ತಾ: | 72 | 93 | ಪ.ಜಾ | ಪ.ಜಾ | ದೂಪದಹಳ್ಳಿ ಕೂಡ್ಲಿಗಿ ತಾಲೂಕು |
| 10 | ರೊಟ್ಟಿ ಕನಕಪ್ಪ ಹಲಗಾಪುರ ಗ್ರಾ.ಪಂ. ಹ.ಬೊ.ಹಳ್ಳಿ ತಾ: | 06 | 94 | ಪ.ಪಂ. | ಸಾಮಾನ್ಯ | ಗಾದಿಗನೂರು ಹೊಸಪೇಟೆ ತಾಲೂಕು |
| 11 | ಸುದರ್ಶನ ರೆಡ್ಡಿ ಬೀರಳ್ಳಿ ಗ್ರಾ.ಪಂ. ಸಿರುಗುಪ್ಪ ತಾ: | 41 | 95 | 3(ಎ) | 3(ಎ) (ಮಹಿಳೆ) | **ಸಂಜೀವರಾಯನಕೋಟೆ ಬಳ್ಳಾರಿ ತಾಲೂಕು** |

**ಷರತ್ತುಗಳು**.

1. ಈ ಆದೇಶದಲ್ಲಿ ನೇಮಕಾತಿ ಮಾಡಿದ ಅಭ್ಯರ್ಥಿಗಳ ನೇಮಕಾತಿಯು ಕಾಲಕಾಲಕ್ಕೆ ಸರ್ಕಾರದಿಂದ ಮತ್ತು ಮಾನ್ಯ ನ್ಯಾಯಾಲಯಗಳಿಂದ ಜಾರಿಯಲ್ಲಿರುವ ನಿಯಮಗಳು ಮತ್ತು ಆದೇಶಗಳಿಗೆ ಒಳಪಟ್ಟಿರುತ್ತದೆ.
2. ಸದರಿ ಅಭ್ಯರ್ಥಿಗಳು ಸೇವೆಗೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳವರೆಗೆ ಪರೀಕ್ಷಾ ಪೂರ್ವ ಅವಧಿಯಲ್ಲಿರುತ್ತಾರೆ.
3. ಸದರಿ ಅಭ್ಯರ್ಥಿಗಳು ಗ್ರೇಡ್-2 ಕಾರ್ಯದರ್ಶಿಗಳಾಗಿ ಕರ್ತವ್ಯಕ್ಕೆ ಹಾಜರಾಗುವಾಗ ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಕಂಡ ದಾಖಲೆಗಳನ್ನು ಪಡೆದುಕೊಳ್ಳತಕ್ಕದ್ದು.
   - ಗ್ರಾ.ಪಂ.ಯಲ್ಲಿ ನೇಮಕಾತಿ ಮಾಡಿಕೊಂಡ ಠರಾವು ಪ್ರತಿ
   - ಗ್ರಾ.ಪಂ. ನೌಕರರನ್ನು ನೇಮಕ ಮಾಡಿಕೊಂಡಿರುವ ನಿರ್ಣಯಕ್ಕೆ ಜಿಲ್ಲಾ ಪಂಚಾಯತಿಯ ಮು.ಕಾ.ನಿ.ಅ. ಅವರಿಂದ ಅನುಮೋದನೆ ನೀಡಿರುವ ಪತ್ರದ ಪ್ರತಿ
   - ಸಮತಳ ಮೀಸಲಾತಿಗೆ (ಅಂಗವಿಕಲ. ಗ್ರಾಮೀಣ ಅಭ್ಯರ್ಥಿ. ಮಾಜಿ ಸೈನಿಕ. ಯೋಜನಾ ನಿರಾಶ್ರಿತರು. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವವರು) ಒಳಪಡುವ ಬಗ್ಗೆ ಪ್ರಮಾಣ

ಕಚೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com



ಪತ್ರ ಮತ್ತು ಮಹಿಳಾ ಅಭ್ಯರ್ಥಿಯಾಗಿದ್ದಲ್ಲಿ ಸದರಿ ಮೀಸಲಾತಿಗೆ ಒಳಪಡುವ ಬಗ್ಗೆ ದೃಢೀಕರಣ ಪತ್ರ

- ಸದರಿಯವರ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಬಾಕಿಯಿದೆಯೇ/ಗ್ರಾ.ಪಂ.ಗೆ ಯಾವುದೇ ಹಣ ಪಾವತಿಸುವುದು ಬಾಕಿಲ್ಲದ ಬಗ್ಗೆ ಸಂಬಂಧಿಸಿದ ಗ್ರಾ.ಪಂ. ಪಂ.ಅ.ಅ. ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರಿಂದ ದೃಢೀಕರಣ
- ಹಣ ದುರುಪಯೋಗದ ಪ್ರಕರಣಗಳಲ್ಲಿ ಆಡಿಟ್ ವರದಿಗಳಲ್ಲಿ ಆಕ್ಷೇಪಣೆ ಇಲ್ಲದೇ ಇರುವ ಬಗ್ಗೆ ಸಂಬಂಧಿಸಿದ ಪಂ.ಅ.ಅ. ಮತ್ತು ಕಾರ್ಯನಿರ್ವಾಹಕ ಅಧಿಕಾರಿಯವರು ದೃಢೀಕರಿಸಿಕೊಳ್ಳತಕ್ಕದ್ದು.
- ಗ್ರೇಡ್-2 ಕಾರ್ಯದರ್ಶಿಯಾಗಿ ಆಯ್ಕೆಯಾಗುವ ಬಗ್ಗೆ "ಇಚ್ಛಾ ಪ್ರಮಾಣ ಪತ್ರ"ವನ್ನು ರೂ.50/-ಗಳ ಛಾಪಾ ಕಾಗದದಲ್ಲಿ ಬರೆದು ನ್ಯಾಯಾಲಯದ ನೋಟರಿಯವರಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.
- ಗ್ರಾಮ ಪಂಚಾಯತಿಯಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿರುವುದಕ್ಕೆ ನಿರಂತರ ಸೇವಾ ಪ್ರಮಾಣ ಪತ್ರ ಸಲ್ಲಿಸಬೇಕು
- ಜಿಲ್ಲಾ ಶಸ್ತ್ರಚಿಕಿತ್ಸಕರಿಂದ ಪಡೆದ ದೇಹದಾರ್ಢ್ಯತೆ ಪ್ರಮಾಣ ಪತ್ರ
- ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಮೂಲ ದಾಖಲಾತಿಗಳು
- ಆಸ್ತಿ ಮತ್ತು ಋಣ ಪಟ್ಟಿ
- ಕುಟುಂಬದ ಸದಸ್ಯರ ಬಗ್ಗೆ ಘೋಷಣಾ ಪ್ರಮಾಣ ಪತ್ರ
- ಭಾರತೀಯ ಸಂವಿಧಾನಕ್ಕೆ ನಿಷ್ಠಾವಂತನಾಗಿರುತ್ತೇನೆಂಬ ಘೋಷಣಾ ಪ್ರಮಾಣ ಪತ್ರ
- ಆಯ್ಕೆಯಾಗಿರುವ ಪ್ರವರ್ಗಕ್ಕೆ ಸಂಬಂಧಿಸಿದಂತೆ ವರ್ಗದ ಜಾತಿ/ಆದಾಯ ಪ್ರಮಾಣ ಪತ್ರ
- ಯಾವುದೇ ಕ್ರಿಮಿನಲ್ ಆರೋಪಗಳಡಿ ಕ್ರಿಮಿನಲ್ ಮೊಕದ್ದಮೆ ದಾಖಲಾಗಿಲ್ಲದೇ ಇರುವ ಕುರಿತು ಪೋಲೀಸರಿಂದ ಪ್ರಮಾಣ ಪತ್ರ

4. ಅಭ್ಯರ್ಥಿಗಳು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013ರ ಕಲಂ 371ಜೆ ಅಡಿ ಸ್ಥಳೀಯರು ಎಂಬುದಕ್ಕೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪ್ರಮಾಣ ಪಡೆದು ಸಲ್ಲಿಸತಕ್ಕದ್ದು ಹಾಗೂ ಸ್ಥಳೀಯ ವೃಂದದಲ್ಲಿ ಸೇರಲು ಇಚ್ಛಿಸುವ ಕುರಿತು ತಮ್ಮ ಅಭಿಮತವನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.
5. ಮೇಲಿನಂತೆ ದಾಖಲೆಗಳನ್ನು ಪಡೆದ ನಂತರ ಕಾರ್ಯನಿರ್ವಾಹಕ ಅಧಿಕಾರಿಗಳು ಅವರು ಸಲ್ಲಿಸಿದ ವಿದ್ಯಾರ್ಹತೆಯ ದಾಖಲೆಗಳಾದ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ನೈಜತೆ ಕುರಿತು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಸಿಂಧುವಾಗಿರುವ ಕುರಿತು ಪ್ರಮಾಣ ಪತ್ರ ಪಡೆಯತಕ್ಕದ್ದು ಮತ್ತು ಸಲ್ಲಿಸಿದ ಜಾತಿ ಪ್ರಮಾಣ ಪತ್ರದ ಕುರಿತು ಸಿಂಧುತ್ವ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಳ್ಳತಕ್ಕದ್ದು.

ಕಛೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

6. ಸದರಿ ಅಭ್ಯರ್ಥಿಗಳು ತಮ್ಮ ಎರಡು ವರ್ಷದ ಪರೀಕ್ಷಾ ಪೂರ್ವ ಅವಧಿಯಲ್ಲಿ ಗ್ರೇಡ್-2 ಕಾರ್ಯದರ್ಶಿ ಹುದ್ದೆಗೆ ನಿಗದಿಪಡಿಸಿದ ಈ ಕೆಳಕಂಡ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು.
   - ಅಕೌಂಟ್ಸ್ ಲೋಯರ್.
   - ಸಿ.ಡಿ.ಪಿ. ಭಾಗ-1
   - ಸಿ.ಡಿ.ಪಿ. ಭಾಗ-2
   - ಕನ್ನಡ ಭಾಷಾ ಪರೀಕ್ಷೆ
   - ಸರ್ಕಾರದ ಆದೇಶ ಸಂ.ಡಿಪಿಎಆರ್ 43 ಎಸ್‌ಸಿಆರ್ 2008 ದಿನಾಂಕ:18.12.2012ರ ಅನ್ವಯ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ
7. ಸದರಿ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂ.ಎಫ್‌ಡಿ(ಎಸ್‌ಪಿಎಲ್)/04/ಪಿಇ/2005 ದಿನಾಂಕ:31.03.2006ರ ಅನ್ವಯ ಹೊಸ ಅಂಶದಾಯಿಕ ನೂತನ ಪಿಂಚಣಿ ಯೋಜನೆಯಡಿ ಅನ್ವಯಿಸುವುದು.
8. ಅಭ್ಯರ್ಥಿಗಳು ಮೇಲಿನಂತೆ ಸಲ್ಲಿಸಿರುವ ದಾಖಲೆಗಳು ಮಾಹಿತಿಗಳು ತಪ್ಪು/ಅಸಿಂಧು ಎಂದು ಕಂಡು ಬಂದಲ್ಲಿ ಈ ಪ್ರಾಧಿಕಾರಿಯು ಸದರಿ ನೇಮಕಾತಿಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಪಡಿಸುವ ಅಧಿಕಾರ ಹೊಂದಿರುತ್ತಾರೆ.
9. ಅಭ್ಯರ್ಥಿಗಳು ಈ ಆದೇಶ ಸ್ವೀಕರಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಸಂಬಂಧಿಸಿದ ತಾಲೂಕು ಪಂಚಾಯತಿಗಳಲ್ಲಿ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅಂತಹವರ ನೇಮಕಾತಿ ಆದೇಶವು ತನ್ನಷ್ಟಕ್ಕೆ ತಾನೇ ರದ್ದಾಗುತ್ತದೆ.

Rajendra

ನೇಮಕಾತಿ ಪ್ರಾಧಿಕಾರಿ ಹಾಗೂ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಬಳ್ಳಾರಿ

ಇವರಿಗೆ

ಶ್ರೀ_______________________

___________________________

___________________________

ಪ್ರತಿಯನ್ನು

1. ಮಾನ್ಯ ಸರ್ಕಾರದ ಪ್ರದಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಅವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಅವರಿಗೆ ಸಲ್ಲಿಸಿದೆ.
3. ಮಾನ್ಯ ಅಧ್ಯಕ್ಷರು/ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ಬಳ್ಳಾರಿ ಅವರಿಗೆ ಮಾಹಿತಿಗಾಗಿ ಸಲ್ಲಿಸಿದೆ
4. ಸಂಬಂಧಿಸಿದ ತಾಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ